LEGISLATIVE ASSEMBLY.

NINTH DAY.

Saturday, 24th March 1951.

The Assembly met in the Legislative Assembly Hall, Old Public Offices Bangalore, at Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

Mr. SPEAKER (The Hon'ble Sri V. Venkatappa).—Questions. Question No. 223. Sri L. H. Thimma Boi.

Sri T. MADIAH GOWDA (Bangalore District—General).—I am afraid he is not entitled to put that question. He was present yesterday.

Mr. SPEAKER.—But he was in the Chair.

Sri T. MADIAH GOWDA.— That makes no difference.

The Hon'ble Sri H. C. DASAPPA (Minister for Finance and Industries)— Anyway, the Hon'ble Speaker has allowed him.

Electrification of Lakkavalli Village.

*Q.—223. **Sri L. H. THIMMA BOI** (Chikmagalur District — Depressed Class).—

Will the Government be pleased to state :—

(*a*) whether the estimate for the electrification of Lakkavalli has been sanctioned ;

(*b*) the distance to the village from the present place of illumination ;

(*c*) when electrification will be taken up and completed ?

*A.—**The Hon'ble Sri K. T. BHASHYAM** (Minister for Law and Labour.)—

(*a*) No.

(*b*) Half a mile from the Dam site.

(*c*) As soon as funds permit.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ಲಕ್ಕವಳ್ಳಿ ಕಾಲೋನಿಗೆ ಎಲೆಕ್ಟ್ರಿಫಿಕೇಷನ್ ಆಗಿದೆ, ಹಾಗಿದ್ದರೆ ಆ ಲೈನು ಲಕ್ಕವಳ್ಳಿ ಸಮೀಪಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಲಕ್ಕವಳ್ಳಿ ಪ್ಯಾಜೆಕ್ಟು ಲಕ್ಕವಳ್ಳಿಯ ಸಮೀಪದಲ್ಲೇ ಇದೆ. ಆದ್ದರಿಂದ ಆ ಲೈನೂ ಕೂಡ ಅದರ ಹತ್ತಿರವೇ ಇದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಲ್ಲಿ ಕೆಲವು ಮನೆಗಳಿಗೆ ಎಲೆಕ್ಟ್ರಿಕ್ ಲೈಟು ಇದೆ. ಆ ಮನೆಗಳು ಲಕ್ಕವಳ್ಳಿ ಸಂಚಾಯತಿ ನರಹದ್ದಿನಲ್ಲಿವೆಯೋ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆದ್ದರಿಂದ ಕೆಲವು ಭಾಗಕ್ಕೆ ಕೊಟ್ಟು ಕೆಲವು ಭಾಗಕ್ಕೆ ಕೊಡದೇ ಇರುವುದರಿಂದ ಅನ್ಯಾಯವಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಭಾಗ ಅಲ್ಲಿಗೆ ಹತ್ತಿರವಾಗಿತ್ತು, ಆದ್ದರಿಂದ ಕೊಟ್ಟೆವು, ಈ ಭಾಗಕ್ಕೆ ಅಂದಾಜು ಮಾಡಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಮುಂದೆ ಲಕ್ಕವಳ್ಳಿ ಊರಿಗೆ ಜಾಗ್ರತೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

ಮಾನ್ಯ ಶ್ರೀ ಕೆ. ಟಿ ಭಾಷ್ಯಂರವರು.—ಅಂದಾಜು ಮಾಡಿದ್ದೇವೆ. ಮಂಜೂರಾದ ಕೂಡಲೇ ಕೊಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಎಂದರೆ ಜಾಗ್ರತೆ ಕೊಡುತ್ತೀರಿ ಎಂತಲೇ ಅಥವಾ ಬಹಳ ಜಾಸ್ತಿ ಕಾಲ ತೆಗೆದುಕೊಳ್ಳುತ್ತದೆ ಎಂತಲೇ ? ಈ ವರ್ಷವೇ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—70,000 ರೂಪಾಯಿ ಅಂದಾಜಾಗಿದೆ. ಮಂಜೂರಾಗಬೇಕು, ಮಂಜೂರಾದ ಕೂಡಲೇ ಕೊಡುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ಅಂದಾಜು ಮಂಜೂರುಮಾಡುವವರು ಯಾರು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕ್ಯಾಬಿನೆಟ್‌ನಲ್ಲಿ ಪರ್ಯಾಲೋಚನೆಗೆ ಬಂದು ಆ ಮೇಲೆ ಮಂಜೂರಾಗುತ್ತದೆ.

ಶ್ರೀ ಎಂ. ಎಸ್. ಜೋಯಿಸರು.—ಕ್ಯಾಬಿನೆಟ್‌ನಲ್ಲಿ ತಾವು ಸಾಕಾದಷ್ಟು ಒತ್ತಾಯ ಮಾಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಾಕಾದಷ್ಟು ಒತ್ತಾಯ ಮಾಡುತ್ತೇವೆ. ಆದರೆ ದುಡ್ಡಿರಬೇಕು.

ಶ್ರೀ ಎಂ. ಎಸ್. ಜೋಯಿಸರು.—ದುಡ್ಡಿಲ್ಲದಿದ್ದರೆ, ಸಾಧ್ಯವಿಲ್ಲ ಎಂದು ಭಾವಿಸೋಣವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ದುಡ್ಡಿಲ್ಲದೆ ಅನೇಕ ಯೋಜನೆಗಳು ನಿಂತುಹೋಗಿವೆ. ದುಡ್ಡು ಬಂದರೆ ಸಾಮಾನುಗಳನ್ನು ಒದಗಿಸಿಕೊಂಡು ಕೆಲಸ ಪೂರ್ತಿ ಮಾಡುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು.—ಈಗಿರುವಹಾಗೆ ದುಡ್ಡಿಲ್ಲ. ಮುಂದೆ ದುಡ್ಡು ಬಂದರೆ ಮಾತ್ರ ಮಾಡುವುವುದಕ್ಕೆ ಸಾಧ್ಯವಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇರುವ ದುಡ್ಡಿನಲ್ಲೇ ಮಾಡುವುದಕ್ಕೆ ಆಗುವ ಹಾಗಿದ್ದರೆ ಪ್ರಯತ್ನಪಡುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು.—ಇರುವ ದುಡ್ಡಿನಲ್ಲೇ ಮಾಡಬೇಕೆಂಬ ಮನಸ್ಸಿದ್ದಲ್ಲಿ ಭರವಸೆ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮನಸ್ಸಿದ್ದರೂ ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸರು.—ಎಂದರೆ ಆದರೂ ಆಗಬಹುದು, ಇಲ್ಲದೇ ಹೋದರೂ ಹೋಗಬಹುದು ಎಂತಲೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ದುಡ್ಡಿಲ್ಲದೇ ಇರುವುದು ನಿಧಾನವಾಗಿರುವುದಕ್ಕೆ ಕಾರಣವಾದರೆ ಯಾರಿಗೆ ಪವರ್ ಬೇಕೋ ಅವರು ಹಣವನ್ನು ಕಾಂಟ್ರಿಬ್ಯೂಟ್ ಮಾಡಿದರೆ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಒಬ್ಬಬ್ಬರು ದುಡ್ಡು ಕೊಡುವುದರಿಂದ ಆಗುವುದಿಲ್ಲ. ಏನಾದರೂ ಒಂದು ಯೋಜನೆ ಮಾಡಿ, ಜನರಿಂದ ಪಬ್ಲಿಕ್ ಫಂಡ್ ಶೇಖರಿಸುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಆಲೋಚನೆ ಮಾಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಯಾರ್ಯಾರಿಗೆ ಪವರ್ ಬೇಕೋ ಅವರೆಲ್ಲಾ ಒಪ್ಪಿಕೊಂಡು ಸಾಲದ ರೂಪದಲ್ಲಿ ಕಾಂಟ್ರಿಬ್ಯೂಷನ್ ಕೊಟ್ಟರೆ ಆ ಲೈನನ್ನು ಮಂಜೂರುಮಾಡುವುದಕ್ಕೆ ಸರ್ಕಾರವಮರು ಯೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಊಹಾಪ್ರಶ್ನೆ ಆಯಿತು. ಆ ರೀತಿ ಒಂದು ಯೋಜನೆ ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗಾದರೆ ಆ ತತ್ವವನ್ನು ಒಪ್ಪಿಕೊಂಡು ಆ ರೀತಿ ಮಾಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).—ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆ ಎಂಬ ಭರವಸೆ ಕೊಡುತ್ತೀರಾ ಎಂದು ಒಬ್ಬ ಮಾನ್ಯ ಸದಸ್ಯರು ಕೇಳಿದರು. ಇದೇ ರೀತಿ ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆ ಅಥವಾ ಬಡುತ್ತೇವೆ ಎಂದು ಹೇಳುವುದು ತಪ್ಪಾಗುವುದಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒತ್ತಾಯಪಡಿಸುತ್ತೇವೆ ಎಂದು ಹೇಳುವುದು ತಪ್ಪಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ನಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಿಲ್ಲದಿರುವಾಗ ಹೊರ ಪ್ರಾಂತ್ಯಗಳಿಗೆ ಏಕೆ ಕೊಡುತ್ತೀರಿ ?

ಅಧ್ಯಕ್ಷರು.—ಇದು ಹೊರ ಪ್ರಾಂತ್ಯಗಳಿಗೆ ಕೊಡುವ ಪ್ರಶ್ನೆಯಲ್ಲ. ಲಕ್ಕವಳ್ಳಿಗೆ ಸಂಬಂಧಪಟ್ಟದ್ದು.

ಶ್ರೀ ಎಚ್. ಸಿದ್ದವೀರಪ್ಪನವರು.—It is a part of our State. ವಿದ್ಯುಚ್ಛಕ್ತಿಯನ್ನು ಹೊರಗೆ ಕೊಡುತ್ತಿದ್ದಾರೆ, ಅದಕ್ಕೋಸ್ಕರ ಕೇಳಿದೆ.

Mr. SPEAKER.—Next question. Sri G. Veerappa. The Hon'ble Member is not present. Question No. 213 will be treated as an unstarred question.

Next question. Sri K. R. Madhava Rao. The Hon'ble Member is not present. Question No. 158 will be treated as an unstarred question.

Questions No. 9, No. 19, No. 20, No 224 in the V set. The Hon'ble Chief Minister is not present. They will be taken up later.

Next question. Sri M. Govinda Reddy.

Handing over State-managed industries to private agencies.

*Q.—21. Sri M. GOVINDA REDDY (Chitaldrug District—General).—

Will the Government be pleased to state :—

(*a*) whether they are contemplating handing over State-managed industries to private agencies ;

(*b*) if so, the exact nature of the terms and conditions on which the industries are proposed to be handed over ?

*A.—The Hon'ble Sri H. C. DASAPPA (Minister for Finance and Industries).—

(*a*) and (*b*). The desirability of gradually transferring the ownership and management of some of the Government industrial concerns to Joint-Stock Companies is under consideration of the Government. No decision has yet been taken in regard to the number or nature of the concerns to be so transferred or the terms and conditions of transfer; nor has any general policy been formulated in the matter.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸ್ಟೇಟ್ ಮ್ಯಾನೇಜ್‌ಡ್ ಇಂಡಸ್ಟ್ರೀಗಳನ್ನು ಪ್ರೈವೇಟ್ ಏಜೆನ್ಸಿಗೆ ಕೊಡುವುದನ್ನು ಯೋಚನೆಮಾಡುತ್ತಿದ್ದೇವೆ ಎಂದು ಉತ್ತರ ಕೊಡಲಾಗಿದೆ. ಅದರಲ್ಲಿ ಎಲ್ಲಾ ಕೈಗಾರಿಕೆಗಳನ್ನು ಖಾಸಗೀ ಸಂಸ್ಥೆಗಳಿಗಾಗಲೀ, ಜನರಿಗಾಗಲೀ ವಹಿಸಬೇಕೆಂದಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಯಾವುದಾದರೂ ಕೆಲವು ಕೈಗಾರಿಕೆಗಳನ್ನು ವಹಿಸಬೇಕೆಂದಿದೆಯೇ?